ಮಂಗಳೂರು ಹಂಚು ಹೊದಿಸಿದ ಹಳೆಯ ಕಾಲದ ಮನೆಯಲ್ಲಿ. ಉದ್ಯೋಗವನ್ನರಸಿ ಮುಂಬಯಿಗೆ ಬಂದು ನಿಲ್ಲಲು ನೆಲೆ ಇಲ್ಲದವರಿಗೆ, ತಾತ್ಕಾಲಿಕ ಆಶ್ರಯ ಬೇಡಿದವರಿಗೆ ತಮ್ಮ ಒಂದು ಕೋಣೆಯನ್ನು ಅವರ ಬಳಕೆಗಾಗಿ ತಾತ್ಕಾಲಿಕ ನೆಲೆಯಲ್ಲಿ ಬಿಟ್ಟುಕೊಡುತ್ತಿದ್ದರು. ಅದೂ ಉಚಿತವಾಗಿ.

ಅಪ್ಪಾ ಸಾಹೇಬರು ತನ್ನ ಚೆಂಬೂರು ಮನೆಯ ಹಿತ್ತಿಲಿನಲ್ಲಿ ತಮಗೆ ಬೇಕಾದ ಕಾಯಿಪಲ್ಲೆಗಳನ್ನು ಬೆಳೆಸಿಕೊಳ್ಳುತ್ತಿದ್ದರು. ಅರುಣೋದಯಕ್ಕೂ ಮೊದಲು ಹಾಸಿಗೆ ಬಿಟ್ಟೇಳುತ್ತಿದ್ದ ಅವರು ಪ್ರಾತಃವಿಧಿಗಳನ್ನು ಮುಗಿಸಿ, ಅರೆ ತಾಸು ಯೋಗ ಹಾಗೂ ಅಷ್ಟೇ ಸಮಯ ಧ್ಯಾನ ಪೂರೈಸಿ, ಸ್ವಲ್ಪ ಹೊತ್ತು ಚರಕದಿಂದ ನೂಲು ತೆಗೆಯುತ್ತಿದ್ದರು. ಆ ಬಳಿಕ ಅರ್ಧ ಲೋಟ ಕೊತ್ತಂಬರಿ ಕಷಾಯ ಕುಡಿದು ತಮ್ಮ ಕೈದೋಟದ ಆರೈಕೆಗೆ ಹೊರಡುತ್ತಿದ್ದರು. ಅವರ ಅಡುಗೆಗೆ ಬೇಕಾದ ಕಾಯಿಪಲ್ಲೆಗಳು, ಸೊಪ್ಪು, ಗಡ್ಡೆಗಳು ಮಾತ್ರವಲ್ಲದೆ ಬಾಳೆ, ಸಪೋಟ, ಹಲಸು, ಮಾವು ಮುಂತಾದ ಫಲವೃಕ್ಷಗಳುಳ್ಳ ತೋಟವನ್ನು ಪ್ರೀತಿಯಿಂದ ಪೋಷಿಸುತ್ತಿದ್ದ ಅಪ್ಪಾ ಸಾಹೇಬರು ಕುಂಬಳ, ಸೌತೆಕಾಯಿಯ

